

ಮೇ ತಿಂಗಳ ತಾಪ... ಹೆಚ್ಚಿತ್ತು. ಹೊಟ್ಯಾಗಿನ ಒಳಗುದಿ ಮೈಮ್ಯಾಲೆ ಬೆವರಿಳಿಸುವಷ್ಟು ಹೆಚ್ಚಾಗಿತ್ತು. ಇಡೀ ಭೂಮಿಗೇ ಉರಿ ಬಿದ್ದಂಥ ಝಳ. ಬ್ಯಾಸಗ್ಯಾಗ ರೊಟ್ಟಿ ಬಡೀಮುಂದ ಆಗುವಷ್ಟೇ ಸಂಕಟ ಇಡೀ ದಿನ. ಇಡೀ ರಾತ್ರಿ. ಮನಸು ಬ್ಯಾಡ ಬ್ಯಾಡಂದ್ರೂ... ನಮಗ ಬ್ಯಾಡಾಗಿದ್ದ ವಿಚಾರ ಹೊಳ್ಳಿ ಹೊಳ್ಳೀ ತರ್ತಾವ. ಇದೂ ಹಂಗೆ. ಬಿಸಿಲಿಗೂ ರೊಟ್ಟಿ ಝಳಕ್ಕೂ ಮನಸಿಗೂ ಒಂದೇ ಎಳಿಯೊಳಗ ತೊಗೊಂಬಂದಿತ್ತು. ಬಿಸೀ ರೊಟ್ಟಿ ಮಾಡೂಮುಂದೆಲ್ಲ ನೆನಪಾಗ್ತದ.

ನಮ್ಮವ್ವ ಒಮ್ಮೆಮ್ಮೆ ಬ್ಯಾಸತ್ತಾಗ ರೊಟ್ಟಿ ಬಡೀತಿದ್ಲು. ಸಂಜೀ ಅಡಗಿ ಏನೂ ಮಾಡಾಕ ಮನಸಿರಲಾರದಾಗ... 'ನನ್ನ ಕೈ ಹಿಡಿದಾಕೆ... ಅಳು ನುಂಗಿ ನಗುವೊಮ್ಮೆ' ಹಾಡು ಸಾಗಿದಂಗ ರೊಟ್ಟಿ ಬುಟ್ಟಿ ತುಂಬ್ತಿತ್ತು. ಆದ್ರ ರೊಟ್ಟಿಗೆ ಪಲ್ಯ? ಪಲ್ಯನೂ ಇಲ್ಲ, ಏನೂ ಇಲ್ಲ. ಅಗಸಿ, ಗುರೆಳ್ಳು, ಸೇಂಗಾ ಹಿಂಡಿ ಡಬ್ಬಿ ಮುಂದಿರ್ತಿದ್ವು. ಬೆಣ್ಣಿ ಇಲ್ಲಾಂದ್ರ ತುಪ್ಪ ಎರಡೂ ಜೊತಿಗೆ ಇರ್ತಿದ್ವು. ಬಿಸೀರೊಟ್ಟಿ ಹಂಚಿನಾಗ ಇದ್ದಾಗ ಬೆಣ್ಣಿ ಮುದ್ದಿಯೊಂದು ಅದರ ಮ್ಯಾಲೆ ಬೀಳ್ತಿತ್ತು. ಕತ್ರಿನಾಳ ಸೊಂಟದ ಬಳಕಿನ್ಹಂಗೆ ಅದೂ ಬಳಕ್ಕೊಂತ ಕರಗ್ತಿತ್ತು. ಅದರ ಮ್ಯಾಲೆ ಒಂದಷ್ಟು ಹಿಂಡಿ ಹಾಕಿ ಸುಳ್ಳಿ ಸುತ್ತಿ ಕೊಟ್ರ... ಆಹಹಾ... ಏನು ರುಚಿ... ಸುಳ್ಳಿ ಒಲ್ಯ ಅಂದ್ರ ಒಳಕಲ್ಲಿನಾಗ ಬಿಸಿ ಉಗಿಯಾಡು ರೊಟ್ಟಿ ಒಗೀತಿದ್ಲು. ಬಳ್ಳೊಳ್ಳಿ, ಜೀರಗಿ, ಉಪ್ಪು, ಹಾಕಿ ರೊಟ್ಟಿಗೆ ದಬದಬ ಬಡದ್ಹಂಗೆನೆ ಒಂದಷ್ಟು ಕುಟ್ಟಿ ಉಂಡಿ ಕಟ್ಟಿ ಕೊಡ್ತಿದ್ಲು.

ಅವಾಗೆಲ್ಲ ಅಂದ್ಕೊತಿದ್ದೆ... ನಾ ಅಂತೂ ರೊಟ್ಟಿ ಮಾಡೂದಿಲ್ಲ. ಮಾಡಿದ್ರೂ ಶಿಸ್ತಗೆ ಅಡಗಿ ಮಾಡ್ತೀನಿ. ಹಿಂಗೇನರೆ ಸುತ್ತಿ ಕೊಡೂದು, ಜಜ್ಜಿ ಕೊಡೂದು ಮಾಡೂದಿಲ್ಲ ಅಂತ ಪ್ರತಿ ಸಲೆ ಅಂದ್ಕೊತಿದ್ದೆ. ಆಮ್ಯಾಲೆ ನಂಗ 'ನನ್ನ ಕೈ ಹಿಡಿದಾಕೆ...' ಹಾಡು ಸೇರ್ತಿರಲಿಲ್ಲ. ಅದು ಹಾಡ್ಕೊಂತ ಒಂದು ಕಣ್ಣೀರ ಹನಿ ರೊಟ್ಟಿ ಹಿಟ್ಟಿನ ಜೊತಿಗೆ ಸೇರ್ತಿತ್ತು. ಅದಕ್ಕೆ ರೊಟ್ಟಿ ಉಪ್ಪುಪ್ಪು ಹತ್ತತದ ಅನಸ್ತಿತ್ತು. ಅದಕ್ಕೆ ನಾನು ಇನ್ನೊಂದು ಹಾಡಿನ ಲಿಸ್ಟ್ ರೆಡಿ ಮಾಡ್ಕೊಂಡಿದ್ದೆ. ಯವಾಗಲೂ ಬೇಂದ್ರೆ ಅಜ್ಜನ ಪದ್ಯ ಹಾಡ್ಕೊಂತ ಅಳೂದು ಬಿಟ್ಟು, ಕಿಶೋರ್‌ಕುಮಾರನ ಹಾಡು ಗುನಗಬೇಕು. 'ಜಿಂದಗಿ ಏಕ್ ಸಫರ್ ಹೈ ಸುಹಾನಾ' ಅಂತ ಹಾಡ್ಕೊಂತ ನಕ್ಕೊಂತ ಇರ್ಬೇಕು.

ಹೌದು. ಅಮ್ಮನ್ಹಂಗ ಆಗಲೇಬಾರದು ಅನ್ನೂದೆ ನನ್ನ ತೀರ್ಮಾನ ಆಗಿತ್ತು. ನಾನು ಕೆಲಸಕ್ಕ ಹೋಗೂದಿಲ್ಲ. ಹೋದ್ರ ನಾವು ಅಮ್ಮಗ ಕಾಯ್ದಂಗ ನನ್ನ ಮಕ್ಕಳು ರಸ್ತೆ ಮ್ಯಾಲೆ ಕಣ್ಣೆಟ್ಟು ಕೂರ್ತಾವ. ನಾ ಹಂಗೆಲ್ಲ ಮಾಡೂದಿಲ್ಲ ಅಂದ್ಕೊಂಡಿದ್ದೆ. ಹೌದು. ಅಮ್ಮನ ಪ್ರತಿಯೊಂದನ್ನು ಅಲ್ಲಗಳೆಯೂದೆ ನನ್ನ ಸ್ವಭಾವ ಆಗಿತ್ತು.

ಓದು ಮುಗೀತು. ಕೆಲಸ ಸಿಕ್ತು. ಮದಿವಿ... ಅಂದಾಗ ಸುಮ್ನಾಗಿದ್ದೆ. ನಂಗ ಮದಿವಿ ಅನ್ನೂದೆ ಅವಾಗ ಬ್ಯಾಡಾಗಿತ್ತು. ಮದಿವಿ ಆದ್ರ ಕೆಲಸ ಬಿಡಬೇಕು ಅನ್ನೂದು ನನ್ನ ಮನಸಿನಾಳದೊಳಗ ಇತ್ತು. ಆದ್ರ ಆ ಕ್ಷಣಕ್ಕ ನನ್ನ ಕೆಲಸ